ಗಣಕೀಕೃತ ನೆಟ್‌ವರ್ಕ್ ಲಾಟರಿ ಅಡಿಯಲ್ಲಿ ಲಕ್ಕಿ-3 ಎಂಬ ಡ್ರಾ ನಡೆಸಲಾಗುತ್ತಿದೆ. ಹೊರ ರಾಜ್ಯಗಳು ಸಹ ಈ ಎರಡು ಮಾದರಿಯ ಡ್ರಾಗಳನ್ನು ನಡೆಸುತ್ತಿವೆ. ಪ್ಲೇವಿನ್ ಮೂಲಕ ಈ ಕೆಳಕಂಡ ಆನ್‌ಲೈನ್ ಲಾಟರಿಗಳನ್ನು ನಡೆಸುತ್ತಿದ್ದಾರೆ:-

1. ಸಿಕ್ಕಿಂ ಸರ್ಕಾರ:
    1. ಸೂಪರ್ ಲೋಟೋ
    2. ಥಂಡರ್ ಬಾಲ್
2. ಮಹಾರಾಷ್ಟ್ರ ಸರ್ಕಾರ:
    1. ಮಹಾಲೋಟೋ
    2. ಬೋನಸ್‌ಬಾಲ್

ರಾಜ್ಯದಲ್ಲಿ ಮಟ್ಕಾ ಚಾಲನೆಯಲ್ಲಿರುವುದಿಲ್ಲ.

ಅ) ಕರ್ನಾಟಕ ಸಾಂಪ್ರದಾಯಿಕ ಲಾಟರಿಯಿಂದ ವಾರ್ಷಿಕ ಸುಮಾರು ರೂ. 10 ಕೋಟಿ ಹಾಗೂ ಆನ್‌ಲೈನ್ ನೆಟ್ ವರ್ಕ್ ಲಾಟರಿಯಿಂದ ಮೊದಲ ವರ್ಷದಲ್ಲಿ ಕನಿಷ್ಟ 100 ಕೋಟಿಗಳಷ್ಟು ಆದಾಯ ಬರಲಿದೆ.

ಆ) ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಬಂದಿದೆ.

ಉ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಚಿಂತಾಮಣಿಯಲ್ಲಿ ಅಂಗಡಿ ಮಳಿಗೆಗಳ ಅಪೂರ್ಣ ಕಾಮಗಾರಿ

784(824) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ನಗರದ ಹೃದಯ ಭಾಗದಲ್ಲಿ ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ರೈಟ್ಸ್ ಕಂಪೆನಿ (ಭಾರತ ಸರ್ಕಾರದ ನಿಗಮ) ಮುಖಾಂತರ ಅಂಗಡಿ ಮಳಿಗೆಗಳನ್ನು ಶೇ. 90 ಭಾಗದಷ್ಟು 1994 ರಲ್ಲಿ ಮುಗಿಸಿದ್ದು 1995ನೇ ಮಧ್ಯ ಭಾಗದೊಳಗಾಗಿ ಅವರಿಗೆ 70 ಲಕ್ಷ ಪಾವತಿಸಿರುವುದು ನಿಜವೇ?

ಆ) ಒಟ್ಟು ಆ ಕಟ್ಟಡದ ಅಂದಾಜು ಒಂದು ಕೋಟಿ ಐದು ಲಕ್ಷ ಆಗಿದ್ದು, ಈಗ ಪೂರ್ತಿ ಮಾಡದೆ ಮಿಕ್ಕ ಹಣ ರೈಟ್ಸ್‌ನವರಿಗೆ ಪಾವತಿ ಮಾಡದೆ ಕಟ್ಟಡ ಉಪಯೋಗಕ್ಕೆ ಬಾರದೆ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಟ್ಟಡದಲ್ಲಿ 194 ಅಂಗಡಿಗಳು ಇದ್ದು, ಇದರಿಂದ ಚಿಂತಾಮಣಿ ನಗರಸಭೆಗೆ ಯಾವರೀತಿಯ ವರಮಾನವೂ ಇಲ್ಲದೆ ಇರುವುದನ್ನು ಸರ್ಕಾರ ಗಮನಿಸಿದೆಯೇ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಚಿಂತಾಮಣಿ ನಗರದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ರೈಟ್ಸ್ ಕಂಪೆನಿ (ಭಾರತ ಸರ್ಕಾರದ ನಿಗಮ) ಮುಖಾಂತರ 194 ಅಂಗಡಿ ಮಳಿಗೆಗಳ ನಿರ್ಮಾಣ ಕಾಮಗಾರಿ (ಶೇ.90) ರಷ್ಟು ಪೂರ್ಣಗೊಂಡಿದ್ದು, 1995 ರ ಮಧ್ಯ ಭಾಗದೊಳಗಾಗಿ ರೂ. 58 ಲಕ್ಷಗಳನ್ನು ರೈಟ್ಸ್ ಕಂಪೆನಿಗಳ ಪಾವತಿ ಮಾಡಲಾಗಿದೆ.

ಆ) ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ 194 ಮಳಿಗೆಗಳನ್ನು ಕಟ್ಟಲು ಒಂದು ಕೋಟಿ ಏಳು ಲಕ್ಷ ಅಂದಾಜು ಮೊತ್ತವಾಗಿದ್ದು, ಶೇ.90ರಷ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ. ಮಿಕ್ಕಿದ ಹಣವನ್ನು ರೈಟ್ಸ್ ಸಂಸ್ಥೆಗೆ ಪಾವತಿ ಮಾಡಿ ಮಳಿಗೆಗಳನ್ನು ಹರಾಜು ಮಾಡಲು ಕ್ರಮ ತೆಗೆದುಕೊಳ್ಳಲು ಪೌರಾಡಳಿತ ನಿರ್ದೇಶನಾಲಯವು ನಗರಸಭೆಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ.

ಇ) ಹೌದು.

ಈ) ಈಗ ಉಚ್ಚನ್ಯಾಯಾಲಯದ ತಡೆಯಾಜ್ಞೆ ತೆರವು ಆಗಿರುವುದರಿಂದ ಹರಾಜು ಮೂಲಕ ಅಂಗಡಿ ಮಳಿಗೆಗಳನ್ನು ವಿಲೇ ಮಾಡಲು ಚಿಂತಾಮಣಿ ನಗರಸಭೆಗೆ ಸೂಚನೆ ನೀಡಲಾಗಿದೆ.

ಸೇಡಂ ಕ್ಷೇತ್ರದಲ್ಲಿ ಈಶಾನ್ಯ ರಸ್ತೆ ಸಾರಿಗೆ ವಿಭಾಗದ ಬಸ್ಸುಗಳ ಅವ್ಯವಸ್ಥೆ

785(806) ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಯಾದಗಿರಿ ರಸ್ತೆ ಸಾರಿಗೆ ಈಶಾನ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ಸುಗಳ ಅವ್ಯವಸ್ಥೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಯಾದಗಿರಿ ವಿಭಾಗ ಬಸ್ಸುಗಳು ಸಮಯಾನುಸಾರ ನಡೆಯದೇ ಇರುವುದು ಕೆಲವು ರಸ್ತೆಗಳ ಮೇಲೆ ಹಾಗೂ ಮಾರ್ಗವಾಗಿ ನಡೆಸುವ ಬಸ್ಸುಗಳನ್ನು ಸ್ಥಗಿತಗೊಳಿಸುವುದು ನಂತರ ಪ್ರಾರಂಭ ಮಾಡುವುದು ಪುನಃ ಸ್ಥಗಿತಗೊಳಿಸುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗುವುದಿಲ್ಲವೇ;

ಇ) ಪಕ್ಕಾ ರಸ್ತೆಗಳು ಇದ್ದು ಸಹ ಬಸ್ಸುಗಳಿಗೆ ಪ್ರಯಾಣಿಕರ ಒತ್ತಡವಾದರೂ ಸಹ ಸಂಚಾರವನ್ನು ಸ್ಥಗಿತಗೊಳಿಸಲು ಕಾರಣಗಳೇನು?

ಈ) ಈ ರೀತಿ ಯಾದಗಿರಿ ಈಶಾನ್ಯ ವಿಭಾಗದವರು ಬಸ್ಸುಗಳ ಸಂಚಾರ ಅವ್ಯವಸ್ಥೆ ಮಾಡುವುದರಿಂದ ಪ್ರಯಾಣಿಕರಿಗೆ ನಾಗರೀಕರಿಗೆ, ರೈತರಿಗೆ ತೊಂದರೆಯುಂಟಾಗುವುದನ್ನು ಸರಿಪಡಿಸುವುದು ಯಾವಾಗ?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಹೊರ ವರ್ತುಲ ರಸ್ತೆ ನಿರ್ಮಾಣ

785(885) ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಹಾಲಿ ಇರುವ ವರ್ತುಲ ರಸ್ತೆ (ರಿಂಗ್ ರೋಡ್) ಯಿಂದ ಆಚೆಗೆ ಹೊರ ವರ್ತುಲ ರಸ್ತೆ (ಔಟರ್ ರಿಂಗ್ ರೋಡ್) ನಿರ್ಮಾಣ ಮಾಡಲು ಸರ್ಕಾರ ಪರಿಶೀಲಿಸುತ್ತಿರುವುದು ನಿಜವೇ;